# ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1431 |
| ಮಾನ್ಯ ಸದಸ್ಯರ ಹೆಸರು | ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 17.03.2021 |
| ಉತ್ತರಿಸುವ ಸಚಿವರು | ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಹಿಂದಿನ ವರ್ಷಗಳಲ್ಲಿ ಖಾಸಗಿ ಸಂಸ್ಥೆಯವರುಗಳಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಅನುದಾನ ಸಹಿತವಾಗಿ ಅಥವಾ ಅನುದಾನ ರಹಿತವಾಗಿ ಮೆಟ್ರಿಕ್-ಪೂರ್ವ ಮತ್ತು ಮೆಟ್ರಿಕ್-ನಂತರದ ವಸತಿನಿಲಯಗಳನ್ನು ನಡೆಸಲು ಅನುಮತಿ ನೀಡಲಾಗಿದೆಯೇ; | ಹಿಂದಿನ ವರ್ಷಗಳಲ್ಲಿ ಖಾಸಗಿ ಸಂಸ್ಥೆಯವರುಗಳಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಅನುದಾನ ಸಹಿತವಾಗಿ (10 ತಿಂಗಳ ಭೋಜನಾ ವೆಚ್ಚಕ್ಕೆ ಮಾತ್ರ ಸೀಮಿತಗೊಂಡಂತೆ) ನಿಯಮಗಳನ್ವಯ ಮೆಟ್ರಿಕ್-ಪೂರ್ವ ಮತ್ತು ಮೆಟ್ರಿಕ್-ನಂತರದ ವಸತಿನಿಲಯಗಳನ್ನು ನಡೆಸಲು ಸರ್ಕಾರದಿಂದ ಅನುಮತಿ ನೀಡಲಾಗಿರುತ್ತದೆ.<br><br>ಪ್ರಸ್ತುತ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ವತಿಯಿಂದ 228 ಖಾಸಗಿ ಮೆಟ್ರಿಕ್-ಪೂರ್ವ ಮತ್ತು 24 ಖಾಸಗಿ ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, ಕ್ರಮವಾಗಿ 12853 ಮತ್ತು 1179 ವಿದ್ಯಾರ್ಥಿಗಳಿಗೆ ಮಂಜೂರಾತಿ ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ. |
| ಆ) | ಹಾಗಿದ್ದಲ್ಲಿ, ಪ್ರಸಕ್ತ ಸಾಲಿನಲ್ಲಿ ಖಾಸಗಿ ಸಂಸ್ಥೆಯವರುಗಳಿಗೆ ಸದರಿ ವಸತಿನಿಲಯಗಳನ್ನು ಪ್ರಾರಂಭಿಸಲು ಅನುಮತಿ ನೀಡದೇ ಇರಲು ಕಾರಣಗಳೇನು; | ಆರ್ಥಿಕ ಮಿತವ್ಯಯದ ಹಿನ್ನೆಲೆಯಲ್ಲಿ ಹಾಗೂ ಕ್ಲಿಷ್ಟ ಆರ್ಥಿಕ ಪರಿಸ್ಥಿತಿಯಲ್ಲಿ ಅನುದಾನದ ಕೊರತೆಯಿರುವುದರಿಂದ ಪ್ರಸ್ತಾವನೆಗಳನ್ನು 2 ವರ್ಷಗಳ ಅವಧಿಗೆ ತಾತ್ಕಾಲಿಕವಾಗಿ ಮುಂದೂಡುವಂತೆ ಹಾಗೂ ಹೊಸದಾಗಿ ಅನುದಾನಕ್ಕೊಳಪಡಿಸುವಂತಹ ಪ್ರಸ್ತಾವನೆಗಳನ್ನು 2 ವರ್ಷಗಳ ಅವಧಿಗೆ ಶಿಫಾರಸ್ಸು ಮಾಡದಂತೆ ಸೂಚಿಸಿದ್ದು, ಅದರಂತೆ ಖಾಸಗಿ ಮೆಟ್ರಿಕ್-ಪೂರ್ವ ಮತ್ತು ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳಿಗೆ ಮಾನ್ಯತೆ ಪೂರ್ವ / ಮಾನ್ಯತೆಗಾಗಿ ಜಿಲ್ಲೆಗಳಿಂದ ಸ್ವೀಕೃತವಾಗುವಂತಹ ಪ್ರಸ್ತಾವನೆಗಳನ್ನು ಹಿಂತಿರುಗಿಸಲು ಕ್ರಮವಹಿಸಲಾಗಿರುತ್ತದೆ. |
| ಇ) | ಅದರಲ್ಲೂ ಪ್ರಮುಖವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಮೆಟ್ರಿಕ್-ನಂತರದ ವಸತಿನಿಲಯಗಳನ್ನು ನಡೆಸಲು ಖಾಸಗಿಯವರಿಗೆ ಅನುಮತಿ ನೀಡದೇ ಇರುವುದರಿಂದ ಅಲ್ಲಿನ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಪ್ರಸ್ತುತ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ 1137 ಸರ್ಕಾರಿ ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, 122780 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶದ ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ.<br>ಮುಂದುವರೆದು, ಗ್ರಾಮೀಣ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಹೆಚ್ಚಿನ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಕಲ್ಪಿಸುವ ದೃಷ್ಟಿಯಿಂದ ಸರ್ಕಾರದ ಆದೇಶ ಸಂಖ್ಯೆ ಹಿಂವಕ 352 ಬಿಎಂಎಸ್ 2019, ದಿನಾಂಕ 20.1.2020ರಲ್ಲಿ ರಾಜ್ಯದ ವಿವಿಧ ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳಲ್ಲಿ ಸಂಖ್ಯಾಬಲ ಹೆಚ್ಚಳ ಮಾಡಲಾಗಿರುತ್ತದೆ.<br>ಅಲ್ಲದೆ, ಸರ್ಕಾರಿ ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ದೊರಕದ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಅನುದಾನದ ಲಭ್ಯತೆಯನುಸಾರ ವಿದ್ಯಾಸಿರಿ ಯೋಜನೆಯಡಿ ಪ್ರತಿ ಮಾಹೆ ರೂ.1500/- ರಂತೆ ಗರಿಷ್ಠ 10 ತಿಂಗಳಿಗೆ ರೂ.15,000/-ಗಳ ವಿದ್ಯಾರ್ಥಿವೇತನ ನೀಡಲಾಗುತ್ತದೆ. |

..2

| | | |
|---|---|---|
| ಈ) | ಬೆಳಗಾವಿ ವಿಭಾಗದಲ್ಲಿ ಕಳೆದ 02 ವರ್ಷಗಳಲ್ಲಿ ಮೆಟ್ರಿಕ್-ಪೂರ್ವ ಮತ್ತು ಮೆಟ್ರಿಕ್-ನಂತರದ ವಸತಿನಿಲಯಗಳನ್ನು ನಡೆಸಲು ಎಷ್ಟು ಖಾಸಗಿ ಸಂಸ್ಥೆಗಳು ಮನವಿ ಸಲ್ಲಿಸಿದ್ದವು; ಹಾಗೂ ಸದರಿ ಸಂಸ್ಥೆಗಳಿಗೆ ಅನುಮತಿ ನೀಡದಿರಲು ಕಾರಣಗಳೇನು; ಅವುಗಳ ಸಂಪೂರ್ಣ ವಿವರ ನೀಡುವುದು; | ಬೆಳಗಾವಿ ವಿಭಾಗದಲ್ಲಿ ಕಳೆದ 2 ವರ್ಷಗಳಲ್ಲಿ 5 ಖಾಸಗಿ ಮೆಟ್ರಿಕ್-ಪೂರ್ವ ವಸತಿನಿಲಯಗಳನ್ನು ನಡೆಸಲು ಮಾನ್ಯತೆ ಪೂರ್ವ ಅನುಮತಿಗಾಗಿ ಪ್ರಸ್ತಾವನೆಗಳು ಸ್ವೀಕೃತವಾಗಿರುತ್ತದೆ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಉ) | ಇನ್ನಾದರೂ ಗ್ರಾಮೀಣ ಪ್ರದೇಶಗಳನ್ನು ಒಳಗೊಂಡಂತೆ, ಅನುದಾನ ಸಹಿತವಾಗಿ ಅಥವಾ ಅನುದಾನ ರಹಿತವಾಗಿ ಮೆಟ್ರಿಕ್-ನಂತರದ ಮತ್ತು ಮೆಟ್ರಿಕ್-ಪೂರ್ವ ವಸತಿನಿಲಯಗಳನ್ನು ನಡೆಸಲು ಖಾಸಗಿಯವರಿಗೆ ಅನುಮತಿ ನೀಡಲು ಸರ್ಕಾರ ಕ್ರಮ ಕೈಗೊಳ್ಳಲಾಗುವುದೇ? | ಆರ್ಥಿಕ ಮಿತವ್ಯಯದ ಹಿನ್ನೆಲೆಯಲ್ಲಿ ಹಾಗೂ ಈಗಿನ ಕ್ಲಿಷ್ಟ ಆರ್ಥಿಕ ಪರಿಸ್ಥಿತಿಯಲ್ಲಿ ಇಂತಹ ಪ್ರಸ್ತಾವನೆಗಳಿಗೆ ಸಹಮತಿಸಲು ಅನುದಾನದ ಕೊರತೆಯಿರುವುದರಿಂದ ಇಂತಹ ಪ್ರಸ್ತಾವನೆಗಳನ್ನು 2 ವರ್ಷಗಳ ಅವಧಿಗೆ ತಾತ್ಕಾಲಿಕವಾಗಿ ಮುಂದೂಡುವಂತೆ ಹಾಗೂ ಹೊಸದಾಗಿ ಅನುದಾನಕ್ಕೊಳಪಡಿಸುವಂತಹ ಇಂತಹ ಪ್ರಸ್ತಾವನೆಗಳನ್ನು 2 ವರ್ಷಗಳ ಅವಧಿಗೆ ಶಿಫಾರಸ್ಸು ಮಾಡದಂತೆ ಆರ್ಥಿಕ ಇಲಾಖೆಯು ಅಭಿಪ್ರಾಯಿಸಿದೆ. |

ಸಂಖ್ಯೆ:ಹಿಂವಕ 202 ಬಿಎಂಎಸ್ 2021

(ಕೋಟ ಶ್ರೀನಿವಾಸ ಪೂಜಾರಿ)
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಅನುಬಂಧ

ವಿಧಾನಪರಿಷತ್ ಸದಸ್ಯರಾದ ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ.1431ಕ್ಕೆ

*****

ಬೆಳಗಾವಿ ವಿಭಾಗದಲ್ಲಿ ಕಳೆದ 2 ವರ್ಷಗಳಲ್ಲಿ ಖಾಸಗಿ ಮೆಟ್ರಿಕ್-ಪೂರ್ವ ವಸತಿನಿಲಯಗಳ ಮಾನ್ಯತೆ ಪೂರ್ವ ಅನುಮತಿಗಾಗಿ ಬಂದಿರುವ ಪ್ರಸ್ತಾವನೆಗಳ ವಿವರ

| ಕ್ರ. ಸಂ. | ತಾಲ್ಲೂಕು | ಪ್ರಸ್ತಾವನೆಯ ವಿವರ | ಬಾಲಕ / ಬಾಲಕಿ | ಪ್ರಸ್ತಾವನೆಗಳ ವಿವಿಧ ಹಂತಗಳು |
|---|---|---|---|---|
| 1 | ಚಿಕ್ಕೋಡಿ | ಕರ್ನಾಟಕ ಮಾರ್ಡನ್ ಶಿಕ್ಷಣ ಸಂಸ್ಥೆ, ಕೇರೂರ, ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ. | ಬಾಲಕ | ಈ ಕಛೇರಿಯ ಪತ್ರ ದಿನಾಂಕ 8.1.2020ರಲ್ಲಿ ಪ್ರಸ್ತಾವನೆ ಸಂಬಂಧ ಮಾಹಿತಿ/ದಾಖಲಾತಿಗಳನ್ನು ಸಲ್ಲಿಸುವಂತೆ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು, ಬೆಳಗಾವಿ ಜಿಲ್ಲೆ ಇವರನ್ನು ಕೋರಲಾಗಿರುತ್ತದೆ. |
| 2 | ಗೋಕಾಕ್ | ಮಹಿಳಾ ಎಂಪವರ್-ಮೆಂಟ್ ಜನರೇಶನ್ ಅಂಡ್ ಹೆಲ್ತ್ ಅವೇರ್ನೆಸ್ ಸೊಸೈಟಿ, ನಾಗನೂರು ಗ್ರಾಮ, ಮೂಡಲಗಿ, ಗೋಕಾಕ್ ತಾಲ್ಲೂಕು. | ಬಾಲಕ | ಈ ಕಛೇರಿಯ ಪತ್ರ ದಿನಾಂಕ 17.7.2019ರಲ್ಲಿ ಪ್ರಸ್ತಾವನೆ ಸಂಬಂಧ ಮಾಹಿತಿ/ದಾಖಲಾತಿಗಳನ್ನು ಸಲ್ಲಿಸುವಂತೆ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು, ಬೆಳಗಾವಿ ಜಿಲ್ಲೆ ಇವರನ್ನು ಕೋರಲಾಗಿರುತ್ತದೆ. |
| 3 | ಗೋಕಾಕ್ | ಮಹಿಳಾ ಎಂಪವರ್-ಮೆಂಟ್ ಜನರೇಶನ್ ಅಂಡ್ ಹೆಲ್ತ್ ಅವೇರ್ನೆಸ್ ಸೊಸೈಟಿ, ನಾಗನೂರು ಗ್ರಾಮ, ಮೂಡಲಗಿ, ಗೋಕಾಕ್ ತಾಲ್ಲೂಕು. | ಬಾಲಕಿ | ಈ ಕಛೇರಿಯ ಪತ್ರ ದಿನಾಂಕ 17.7.2019ರಲ್ಲಿ ಪ್ರಸ್ತಾವನೆ ಸಂಬಂಧ ಮಾಹಿತಿ/ದಾಖಲಾತಿಗಳನ್ನು ಸಲ್ಲಿಸುವಂತೆ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು, ಬೆಳಗಾವಿ ಜಿಲ್ಲೆ ಇವರನ್ನು ಕೋರಲಾಗಿರುತ್ತದೆ. |
| 4 | ಗೋಕಾಕ್ | ಶ್ರೀ ಮಲ್ಲಿಕಾರ್ಜುನ ಇನ್ಸಿಟ್ಯೂಟ್ ಆಫ್ ಲಿಬರಲ್ ಎಜ್ಯುಕೇಷನ್ ಸೊಸೈಟಿ, ಮೂಡಲಗಿ, ಗೋಕಾಕ್ ತಾಲ್ಲೂಕು. | ಬಾಲಕ | ಈ ಕಛೇರಿಯ ಪತ್ರ ದಿನಾಂಕ 17.7.2019ರಲ್ಲಿ ಪ್ರಸ್ತಾವನೆ ಸಂಬಂಧ ಮಾಹಿತಿ/ದಾಖಲಾತಿಗಳನ್ನು ಸಲ್ಲಿಸುವಂತೆ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು, ಬೆಳಗಾವಿ ಜಿಲ್ಲೆ ಇವರನ್ನು ಕೋರಲಾಗಿರುತ್ತದೆ. |
| 5 | ರಾಯಭಾಗ | ಶ್ರೀ ಸ್ವಾಮಿ ವಿವೇಕಾನಂದ ಶಿಕ್ಷಣ ಸಂಸ್ಥೆ, ಅಜೂರೆ ತೋಟ, ಖಣದಾಳ, ರಾಯಭಾಗ ತಾಲ್ಲೂಕು. | ಬಾಲಕ | ಸರ್ಕಾರದ ಪತ್ರ ಸಂ.ಬಿಸಿಡಬ್ಲ್ಯೂ 207 ಬಿಎಂಎಸ್ 2019, ದಿನಾಂಕ 5.9.2020ರಲ್ಲಿ ಆರ್ಥಿಕ ಮಿತವ್ಯಯದ ಹಿನ್ನೆಲೆಯಲ್ಲಿ ಹಾಗೂ ಕ್ಲಿಷ್ಟ ಆರ್ಥಿಕ ಪರಿಸ್ಥಿತಿಯಲ್ಲಿ ಅನುದಾನದ ಕೊರತೆಯಿರುವುದರಿಂದ ಪ್ರಸ್ತಾವನೆಗಳನ್ನು 2 ವರ್ಷಗಳ ಅವಧಿಗೆ ತಾತ್ಕಾಲಿಕವಾಗಿ ಮುಂದೂಡುವಂತೆ ಹಾಗೂ ಹೊಸದಾಗಿ ಅನುದಾನಕ್ಕೊಳಪಡಿಸುವಂತಹ ಪ್ರಸ್ತಾವನೆಗಳನ್ನು 2 ವರ್ಷಗಳ ಅವಧಿಗೆ ಶಿಫಾರಸ್ಸು ಮಾಡದಂತೆ ಸೂಚಿಸಿದ್ದು, ಅದರಂತೆ ಪ್ರಸ್ತಾವನೆಯನ್ನು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು, ಬೆಳಗಾವಿ ಜಿಲ್ಲೆ ಇವರಿಗೆ ಹಿಂತಿರುಗಿಸಲಾಗಿರುತ್ತದೆ. |